ವೈ.ಎನ್. ಸುಂದರೇಶನ್, ಮೈಸೂರು

*ರಾಜಕಾರಣಿಗಳು ಬ್ರಹ್ಮನಿಗೂ ನಡುಗುವುದಿಲ್ಲ. ಆದರೆ ಪತ್ರಕರ್ತರಿಗೆ ಹೆದರಿ ಸಾಯುತ್ತಾರಲ್ಲ?*



ಸರಿಯೇ; ಬ್ರಹ್ಮ ಕೇವಲ ಹಣೆಬರಹ ಬರೆಯುತ್ತಾನೆ. ಪತ್ರಕರ್ತರು ಹಣೆಬರಹ ಬದಲಾಯಿಸುತ್ತಾರೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಗಣ್ಯರು ನಿಧನರಾದಾಗ ಸರ್ಕಾರಿ ರಜೆ ನೀಡುವುದರಿಂದ ಏನು ಪ್ರಯೋಜನ ರಾಂಜೀ?*

ಟ್ರಾಫಿಕ್ ಕಡಿಮೆ ಆಗುವುದರಿಂದ ಗಣ್ಯರನ್ನು ಹೊತ್ತ ಡೆಡ್ ವ್ಯಾನ್ ಸುಲಭವಾಗಿ ಸ್ಮಶಾನ ತಲುಪಬಹುದು.

ಹೇಮಾವತಿ ಜೈನ್, ಹೂವಿನಹಡಗಲಿ

*ಪರಸ್ಪರ ಹಗುರಾಗೋದು ಹೇಗೆ ಸರ್?*

ನಿಮ್ಮ ಹಣವನ್ನು ನಾನು, ನನ್ನ ಹಣವನ್ನು ನೀವು ಕೆಟ್ಟ ಕಂಪನಿಯ ಷೇರ್‌ನಲ್ಲಿ ಹೂಡುವ ಮೂಲಕ!

ಅಮರಯ್ಯ, ಕಬಾಡಗೇರಾ

*ವಿಜ್ಞಾನಕ್ಕೂ, ವೇದಾಂತಕ್ಕೂ ವ್ಯತ್ಯಾಸವೇನು?*



ಸೇಬು ಕೆಳಗೆ ಬೀಳಲು ಗುರುತ್ವಾಕರ್ಷಣೆ ಕಾರಣ ಎನ್ನುವುದು ವಿಜ್ಞಾನ; ಅದರ ಕರ್ಮ ಸವೆದಿತ್ತು, ಬಿತ್ತು ಎನ್ನುವುದು ವೇದಾಂತ!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

*ಜೀವಕ್ಕಿಂತ ಪ್ರೀತಿ ಯಾವುದು?*

ವಿಲ್, ಇನ್ಶೂರೆನ್ಸ್ ಹಣ!

ವಸುಂಧರಾ ಸತ್ಯ, ದೊಡ್ಡಬಳ್ಳಾಪುರ

*ಜಗದ್ಗುರುಗಳು ತಮ್ಮ ಉತ್ತರಾಧಿಕಾರಿಯನ್ನು ಮೊದಲೇ ನಿರ್ಧರಿಸಿರುತ್ತಾರೆ. ಹಾಗೆಯೇ ನೀವೇನಾದರೂ...?*

ಹ್ಞ! ನಾನು ತೆಂಡುಲ್ಕರ್ ಹುಟ್ಟಿದಂದೇ ಹುಟ್ಟಿದ್ದು; ಹಾಗೆಲ್ಲ ಬಡಪೆಟ್ಟಿಗೆ ಸ್ಥಾನ ಬಿಟ್ಟುಕೊಡುವುದಿಲ್ಲ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಪತ್ರಿಕೆಗಳು ಈಗ ತಮ್ಮ ಮುಖಪುಟವನ್ನು ಜಾಹೀರಾತಿಗೆ ಮಾರಿಕೊಳ್ಳುತ್ತಿವೆಯಲ್ಲಾ ರಾಂ?*

ವರ್ತಮಾನಕ್ಕಿಂತ ವರಮಾನವೇ ಮುಖ್ಯವಂತೆ!

ಶೀಲಾಸತ್ಯೇಂದ್ರಸ್ವಾಮಿ, ಹರವೆಮಠ

*ಹೆತ್ತಾತ ಅರ್ಜುನನು, ಮುತ್ತಯ್ಯ ದೇವೇಂದ್ರ, ಮಾತುಲನು ಹರಿಯಿರಲು ಅಭಿಮನ್ಯು ಸತ್ತನೇಕೆ ಸರ್?*

ಪಾಪದ ಹುಡುಗ! ಥಿಯರಿ ಮಾತ್ರ ಕಲಿತಿದ್ದುದರಿಂದ ಪ್ರಾಕ್ಟಿಕಲ್‌ನಲ್ಲಿ ಫೇಲ್ ಆದ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ನಾವು ಕೋರುವ ಶಾಂತಿ, ಶ್ರದ್ಧಾಂಜಲಿಗಳು ನಿಜಕ್ಕೂ ಮೃತರ ಆತ್ಮವನ್ನು ಮುಟ್ಟುತ್ತವೆಯೆ?*

ಮುಟ್ಟುವಂತಿದ್ದಿದ್ದರೆ ಭೂತಗಳೇ ಇಲ್ಲವಾಗಿ ಹಾರರ್ ಫಿಲ್ಮ್ ನಿರ್ಮಾಪಕ ರಾಮ್ ಗೋಪಾಲ್ ವರ್ಮ ನಿರುದ್ಯೋಗಿಯಾಗುತ್ತಿದ್ದರು!

ಕೆ.ಎಂ. ಲಿಂಗರಾಜು, ನಂಜನಗೂಡು

*ದೇವರು ಒಲಿದರೆ ವರ. ಹುಡುಗಿ ಒಲಿದರೆ?*

ವಾನರ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಒಂದೊಮ್ಮೆ ಮನುಷ್ಯರಿಗೆ ಕತ್ತಲೆಯಲ್ಲೂ ಕಣ್ಣು ಕಾಣುವಂತಿದ್ದರೆ...?*

ಅವರನ್ನು ಗೂಬೆ ಎನ್ನುತ್ತಿದ್ದರೋ ಏನೋ...!

ವಿ. ಹೇಮಂತಕುಮಾರ್, ಬೆಂಗಳೂರು

*ದೃಷ್ಟಿದೋಷಕ್ಕೂ, ವಾಸ್ತುದೋಷಕ್ಕೂ ವ್ಯತ್ಯಾಸವೇನು?*

ಎರಡೂ ಒಂದೇ! ಅತಿಯಾದ ದೃಷ್ಟಿದೋಷಕ್ಕೆ ವಾಸ್ತುದೋಷ ಎಂದು ಕರೆಯುತ್ತಾರೆ.

ಎಂ.ಎಸ್.ಮಂಜುನಾಥ್ ಅಣಜಿ, ಮಾಧನಭಾವಿ

*ನಾನು, ನನ್ನದು ಎಂಬುದನ್ನು ಬಿಟ್ಟು ದೇವನ ಅಧೀನ ಸರಳವಾಗಿರು ಎನ್ನುವ ಜೋತಿಷಿಗಳು ಎಲ್ಲ ಬೆರಳಿಗೂ ಚಿನ್ನದ ಉಂಗುರಗಳನ್ನು ಧರಿಸಿರುತ್ತಾರಲ್ಲ, ಯಾಕೆ?*

ಗಿಲೀಟು ಮನುಷ್ಯನಲ್ಲವೇ; ಭಂಗುರದ ಮಾತುಗಳಿಗೆ ಬಂಗಾರದ ಲೇಪ!

## ಬಹುಮಾನಿತ ಪ್ರಶ್ನೆ

ಪುರುಷೋತ್ತಮ, ಬೆಂಗಳೂರು

*ಮರುಜನ್ಮದಲ್ಲಿ ಹೆಣ್ಣಿನ ಆತ್ಮ ಹೆಣ್ಣನ್ನು, ಗಂಡಿನ ಆತ್ಮ ಗಂಡನ್ನು ಸೇರುವುದೋ ಅಥವಾ ಅದಲುಬದಲಾಗುವುದೋ?*

ಸಾಮಾನ್ಯವಾಗಿ ಆತ್ಮಗಳು ಏಳು ಜನ್ಮದ ಕಾಂಟ್ರಾಕ್ಟ್ ಮೇಲೆಯೇ ಜೋಡಿಗಳಾಗುತ್ತವೆ. ಕೆಲವೊಮ್ಮೆ ಮಾತ್ರ ಸೇಡಿನ ಆಧಾರದ ಮೇಲೆ ಅದಲುಬದಲಾಗುತ್ತವೆ!

ನವಿರವಿ, ಬಾಳೆಹೊನ್ನೂರು

*ಎಲ್ಲದಕ್ಕೂ ಬಲಗೈ, ಬಲಗಡೆ ಎನ್ನುವ ನಾವು ಬರೆಯಲು ಪ್ರಾರಂಭಿಸುವುದು ಎಡಗಡೆಯಿಂದ. ಏಕೆ?*

ಹೃದಯ ಇರುವುದು ಎಡಕ್ಕೇ ಅಲ್ಲವೇ! ಹೃದಯದ ಮಾತುಗಳನ್ನು ಬಿಂಬಿಸಲು ಎಡವೇ ಸೂಕ್ತ!

ಹೆಚ್. ಗೋಪಿನಾಥ್, ಬಳ್ಳಾರಿ

*ದೇವರು ಮಾನವರನ್ನು ಹುಟ್ಟಿಸುವುದು ಮತ್ತು ಸಾಯಿಸುವುದರಲ್ಲಿ ಇರುವ ಔಚಿತ್ಯವೇನು?*

ಜಗವೊಂದು ಚೆಸ್ ಬೋರ್ಡ್; ಬಿಳಿ ಪಾನ್‌ಗಳು ಸೃಷ್ಟಿ; ಕರಿ ಪಾನ್‌ಗಳು ಲಯ; ದೇವ ಪಕ್ಕಾ ಒರಿಜಿನಲ್ ಚೆಸ್ ಹುಚ್ಚ!

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ

*ಅಕ್ರಮ ಗಣಿಗಾರಿಕೆಗೆ ಕೊನೆ ಇಲ್ಲವೆ?*



ಇದೆ. ಪ್ರತಿದಿನ ಸಂಜೆ ಆರಕ್ಕೆ!

ಕೆ. ಮೈಥಿಲಿಕೃಷ್ಣ, ಬೆಂಗಳೂರು

*ಪ್ರಶಸ್ತಿಗಾಗಿ ಲಾಬಿಯಿಂಗ್ ಮಾಡಲು ಬಯಸುತ್ತೀರಾ?*

ಅಗತ್ಯವಿಲ್ಲ; ಒಳ್ಳೆಯ ಉತ್ತರಕ್ಕೆ ನೀವು ಪಡುವ ಸಂತಸಕ್ಕಿಂತ ದೊಡ್ಡ ಪ್ರಶಸ್ತಿಯನ್ನು ಆ ದೇವನ ಅಜ್ಜನೂ ಕೊಡಲಾರ!

ಜಾಕೋಬ್ ಡಿಸೋಜ, ಕುರುವಳ್ಳಿ

*ಸಾಧಕರಿಗೂ, ಸಮಯಸಾಧಕರಿಗೂ ಇರುವ ಭೇದವೇನು?*

ಸಾಧಕರಿಗೆ ಸಮಯ ಕಡಿಮೆ, ಸಮಯಸಾಧಕರಿಗೆ ಸಾಧನೆ ಕಡಿಮೆ!

■ ರಾಮ್